೫) ಕಳ್ಳಸಾಗಾಣಿಕೆಯನ್ನು ಕಡಿಮೆ ಮಾಡಲು ಸಿಬ್ಬಂದಿಗೆ ವಾಹನಗಳನ್ನು ಬಂದೂಕುಗಳನ್ನು ಒದಗಿಸಿ, ಪ್ರತಿದಿನ ಕಳ್ಳತನವಾಗುವ ಪ್ರದೇಶದಲ್ಲಿ ಗಸ್ತು ತಿರುಗಿ ಕಳ್ಳತನ ತಡೆಗಟ್ಟಲು ಸಂಬಂಧಿಸಿದ ಅರಣ್ಯ ಸಿಬ್ಬಂದಿಯು ಶ್ರಮ ವಹಿಸುತ್ತಿದ್ದಾರೆ ಮತ್ತು ನಿಸ್ತಂತು ಉಪಕರಣಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ. ಈ ವಲಯಗಳಿಗೆ ತುರ್ತಾಗಿ ಸಂಪರ್ಕಿಸಲು ದೂರವಾಣಿ ಸೌಲಭ್ಯಗಳನ್ನು ಕೂಡ ಒದಗಿಸಲಾಗಿದೆ. ಇದು ಅಲ್ಲದೆ ಅರಣ್ಯ ಪೋಲೀಸ್ ಸಂಚಾರಿ ದಳಗಳು ಕಾರ್ಯನಿರ್ವಹಿಸುತ್ತಿರುತ್ತದೆ.

ಮಂಗಳೂರು ವಿಶ್ವವಿದ್ಯಾಲಯ ಈ ವರ್ಷದ ಜನವರಿಯಲ್ಲಿ ನಡೆಸಿದ ವಾರ್ಷಿಕ ಪದವಿ ದಾನ ಸಮಾರಂಭದ ಬಗ್ಗೆ

೫೧೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ವಿಶ್ವವಿದ್ಯಾನಿಲಯ ಈ ವರ್ಷದ ಜನವರಿಯಲ್ಲಿ ನಡೆಸಿದ ವಾರ್ಷಿಕ ಪದವೀದಾನ ಸಮಾರಂಭದಲ್ಲಿ " ಗೌರವ ಪದವಿ " ಗಳನ್ನು ನೀಡಲಾದ ಗಣ್ಯರ ಹೆಸರುಗಳೇನು ?

ಆ) ಮೇಲ್ಕಂಡ ಗಣ್ಯರು ಯಾವ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯನ್ನು ಗಣನೆಗೆ ತೆಗೆದುಕೊಂಡು ಈ ಗೌರವ ಪದವಿಗಳನ್ನು ನೀಡಲಾಯಿತು ?

ಇ) ವಿಶ್ವವಿದ್ಯಾನಿಲಯದ ಈ ಕ್ರಮಕ್ಕೆ ಸಾರ್ವಜನಿಕರ ಪ್ರತಿಭಟನೆ ಬಂದಿರುವುದು ನಿಜವೇ ?

ಶ್ರೀ ಎಮ್. ಚಂದ್ರಶೇಖರ್(ಶಿಕ್ಷಣ ಮಂತ್ರಿಗಳು).—

ಅ) ಡಾ. ಕೆ. ವಿ ಪುಟ್ಟಪ್ಪ, ಡಿ. ಸುಬ್ಬರಾಮಿರೆಡ್ಡಿ ಮತ್ತು ಡಾ. ಬಿ. ಎಲ್. ಅಮ್ಮ.

ಆ) ಡಾ. ಕೆ. ವಿ. ಪುಟ್ಟಪ್ಪ ಅವರು ಆಧುನಿಕ ಕನ್ನಡ ಸಾಹಿತ್ಯದ ಸೀಮಾ ಪುರುಷರಲ್ಲಿ ಅಗ್ರ ಗಣ್ಯರೆಂದೂ ಶ್ರೀ ಡಿ. ಸುಬ್ಬರಾಮಿರೆಡ್ಡಿ ಅವರು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಗೌರವ ಉಪಾಧ್ಯಕ್ಷರು ಖ್ಯಾತ ಸಮಾಜ ಸೇವಾಕರ್ತ ಮತ್ತು ಡಾ. ಬಿ. ಎಲ್. ಅಮ್ಮ ಅವರು ಅಂತರ ರಾಷ್ಟ್ರೀಯ ಖ್ಯಾತಿಯ ಆಹಾರ ತಂತ್ರ ಜ್ಞಾನದ ವಿಜ್ಞಾನಿಯೆಂದೂ ಗೌರವ ಪದವಿಗಳನ್ನು ನೀಡಲಾಯಿತು.

ಇ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸುಳ್ಳು ಡಿಗ್ರಿ ಸರ್ಟಿಫಿಕೇಟ್ ಬಗ್ಗೆ

೫೭೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಕಲಿ (ಬೋಟ) ಡಿಗ್ರಿ ಸರ್ಟಿಫಿಕೇಟ್‌ಗಳನ್ನು ನೀಡಿ ಪೋಸ್ಟ್‌ಗ್ರ್ಯಾಜುಯೇಟ್ ಕೋರ್ಸುಗಳಿಗೆ ಪ್ರವೇಶ ಪಡೆದ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ?

ಆ) ಮೇಲ್ಕಂಡ ವರದಿಗಳು ನಿಜವಿದ್ದಲ್ಲಿ ಅವುಗಳನ್ನು ತನಿಖೆ ನಡೆಸಲು ಕರ್ನಾಟಕ ವಿಶ್ವವಿದ್ಯಾನಿಲಯ ತನಿಖಾ ಸಮಿತಿಯನ್ನು ನೇಮಿಸಿದೆಯೇ ?

ಇ) ಈ ಸಮಿತಿಯ ಸದಸ್ಯರು ಯಾರು ?

ಈ) ಈ ಸಮಿತಿ ಈಗಾಗಲೇ ತನ್ನ ಅಂತರಿಕ ವರದಿಯನ್ನು ನೀಡಿದೆಯೇ ?

ಶ್ರೀ ಎಮ್. ಚಂದ್ರಶೇಖರ್(ಶಿಕ್ಷಣ ಮಂತ್ರಿಗಳು).—

ಅ) ೧೯೮೮-೮೯ನೇ ಸಾಲಿಗೆ ಅಪರಾಧ ಶಾಸ್ತ್ರ ಕಾನೂನು ಹಾಗೂ ಶಿಕ್ಷಣ ಕೋರ್ಸುಗಳಿಗೆ ಕೆಲವೊಂದು ಅಭ್ಯರ್ಥಿಗಳು ನಕಲಿ (ಬೋಟ) ಅಂಕಪಟ್ಟಿ ನೀಡಿ ಪ್ರವೇಶ ಪಡೆದಿರುವುದು ಕರ್ನಾಟಕ ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದಿದೆ.